**(**ಇಂದು ದಿನಾಂಕಃ **06/06/2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಕೆ.ಪಿ.ಎಚ್. (ಎ.ಎಸ್.ಪಿ.) ವಕೀಲರಿಂದಃ-**

17. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ನಾನು ಹಾಜರುಮಾಡಿದ 3 ನೋಟೀಸುಗಳನ್ನು ನಿಆರ್-3, ವಿಚಾರಣಾ 2 ನಡವಳಿಗಳನ್ನು ನಿಆರ್-4, ತಿಳುವಳಿಕೆ ಪತ್ರವನ್ನು ನಿಆರ್-5, ಕಾರಣ ಕೇಳುವ ನೋಟೀಸನ್ನು ನಿಆರ್-6 ಮತ್ತು ವಜಾ ಆದೇಶವನ್ನು ನಿಆರ್-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಂ.ಎನ್.ಪಿ. ವಕೀಲರಿಂದಃ-**

18. ಕಳೆದ 37 ವರ್ಷಗಳಿಂದ ನಾನು ಎದುರುದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅರ್ಜಿದಾರ ದಿನಾಂಕಃ09/06/2019 ರಿಂದ 16/03/2020 ರವರೆಗೆ ಕೆಲಸಕ್ಕೆ ಗೈರು ಹಾಜರಾಗಿದ್ದ. ನಾನು ವಿಚಾರಣೆಯಲ್ಲಿ ಭಾಗಿಯಾಗಿದ್ದೆ. ಮೂಲ ಹಾಜರಾತಿ ದಾಖಲೆಯನ್ನು ಹಾಜರುಮಾಡಿದ್ದೆ. ಈ ಪ್ರಕರಣದಲ್ಲಿಯೂ ಹಾಜರುಮಾಡಲಾಗಿದೆ. ಈ ಪ್ರಕರಣದಲ್ಲಿ ಹಾಜರು ಮಾಡಲಾದ ಹಾಜರಾತಿ ಮೂಲ ದಾಖಲೆಯಲ್ಲ ಎಂದರೆ ಅದು ಪ್ರತಿ ಇರುತ್ತದೆ. ಸದರಿ ಪ್ರತಿಗೆ ನನ್ನ ಸಹಿ ಇದೆ. ಅದನ್ನು ಸಿಬ್ಬಂದಿ ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ.

19. ಓ ಎಂದರೆ ವಾರದ ರಜೆ, ಎಲ್ ಎಂದರೆ ಲೀವ್ ಮತ್ತು ಎ ಎಂದರೆ ಅಬ್ಸೆಂಟ್ ಎಂದು ಇರುತ್ತದೆ. ಅರ್ಜಿದಾರ ಕರ್ತವ್ಯಕ್ಕೆ ಹಾಜರಾದರೂ ಗೈರು ಹಾಜರಿ ಎಂದು ತೋರಿಸಿದ್ದೇವೆ ಎನ್ನುವುದು ಸುಳ್ಳು. ಅರ್ಜಿದಾರ ತನಗೆ ಹುಷಾರಿಲ್ಲವೆಂದು ಆಸ್ಪತ್ರೆ ದಾಖಲೆ ಸಹಿತ ಮನವಿ ಸಲ್ಲಿಸಿದ್ದ ಎಂದರೆ ನಂತರ ಅಂಚೆ ಮೂಲಕ ಕಳಿಸಿದ್ದಾನೆ. ಸದರಿ ದಾಖಲೆಗಳನ್ನು ವಿಚಾರಣೆಯಲ್ಲಿ ಪರಿಗಣಿಸಲಾಗಿದೆ. ಸುಳ್ಳು ವರದಿ ಸಲ್ಲಿಸಲಾಗಿದೆ ಎನ್ನುವುದು ಸುಳ್ಳು. ಅರ್ಜಿದಾರ ಹುಷಾರಿಲ್ಲದಾಗ ದಾಖಲೆ ಸಹಿತ ರಜೆ ಅರ್ಜಿ ಕೊಟ್ಟಿದ್ದಾನೆ ಎನ್ನುವುದು ಸುಳ್ಳು. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.